ಓ ಎಸ್ ನಂ. 242/2022
ಡಿ ಡಬ್ಲ್ಯು 1
ದಿನಾಂಕ 18-07-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರಃ ಶ್ರೀ ಕೆ ವಿ ಎಂ ವಕೀಲರಿಂದಃ

ನನ್ನ ತಂದೆಯ ಹೆಸರು ವೀರಭದ್ರಪ್ಪ ಮತ್ತು ತಾಯಿಯ ಹೆಸರು ಗಂಗಮ್ಮ. ನನ್ನ ತಂದೆ ತಾಯಿ ಹಾಗೂ ನಾನು ಮತ್ತು ನನ್ನ ಸಹೋದರರು ಎಷ್ಟು ವರ್ಷಗಳವರೆಗೆ ಒಟ್ಟಿಗೆ ಒಟ್ಟು ಕುಟುಂಬದಲ್ಲಿ ವಾಸ ಇದ್ದೇವು ಎಂದರೆ ಸಾಕ್ಷಿ 1991 ರವರೆಗೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳೆಲ್ಲವೂ ನನ್ನ ಅಜ್ಜನಿಂದ ಬಂದಂತಹ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವೆಲ್ಲರೂ ವಿಭಾಗದಂತೆ ಪ್ರತ್ಯೇಕ ಸ್ವಾಧೀನಾನುಭವದಲ್ಲಿದ್ದೇವೆ ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ಅವರ ಸಹೋದರರ ನಡುವೆ ಯಾವಾಗ ವಿಭಾಗವಾಯಿತೆಂದು ಹೇಳಲಾಗುತ್ತದೆಯಾ ಎಂದರೆ ಸಾಕ್ಷಿ ನಾನು ಜನಿಸುವ ಮೊದಲೇ ಅವರಲ್ಲಿ ವಿಭಾಗವಾಗಿತ್ತು ಎಂದು ನುಡಿಯುತ್ತಾರೆ. ಆ ರೀತಿ ವಿಭಾಗವಾದ ಬಗ್ಗೆ ದಾಖಲೆಗಳನ್ನು ನೋಡಿರುತ್ತೇನಾ ಎಂದರೆ ಸಾಕ್ಷಿ ಇಲ್ಲ, ಆದರೆ ವಿಭಾಗವು ಬಾಯಿಮಾತಿನಂತೆ ಆಗಿದ್ದು, ಅದರಂತೆ ಪ್ರತ್ಯೇಕವಾಗಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ವೀರಭದ್ರಪ್ಪ ಅವರ ಮಕ್ಕಳಾದ ಈ ದಾವೆಯ ವಾದಿ ಮತ್ತು ನನ್ನ

ಇತರೇ ಸಹೋದರ ಮತ್ತು ಸಹೋದರಿಯರ ನಡುವೆ ಯಾವಾಗ ವಿಭಾಗ ಆಯಿತು ಎಂದರೆ ಸಾಕ್ಷಿ ನಾನು ಪ್ರೀತಿಸಿ ಮದುವೆಯಾಗಿದ್ದು, ಆ ಸಮಯದಲ್ಲಿ ನನ್ನ ತಂದೆ, ವಾದಿ ಮತ್ತು ನನ್ನ ಸಹೋದರರ ಮತ್ತು ಸಹೋದರಿಯರು ಸೇರಿ ಪ್ರತ್ಯೇಕ ಮಾಡಿ ವಿಭಾಗ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ವಿಭಾಗ ಬರವಣಿಗೆಯಲ್ಲಿ ಆಗಿರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಪಂಚಾಯಿತಿ ಮೂಲಕ ಆಗಿದೆ ಎಂದು ನುಡಿಯುತ್ತಾರೆ. ನನ್ನ ತಂದೆ ವೀರಭದ್ರಪ್ಪನವರು ವ್ಯವಸಾಯವನ್ನು ಹೊರತು ಪಡಿಸಿ ಬೇರೆ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿ ಕೃಷಿಯೊಂದಿಗೆ ಕಾಯಿ ವ್ಯಾಪಾರ ಮತ್ತು ಬುಕ್ ಬೈಂಡಿಂಗ್ ಪ್ರಿಟಿಂಗ್ ಪ್ರೆಸ್ ನಡೆಸುತ್ತಿದ್ದರು ಎಂದು ನುಡಿಯುತ್ತಾರೆ. 1991 ರಲ್ಲಿ ನಾನು ಒಟ್ಟು ಕುಟುಂಬದಿಂದ ಹೊರಗೆ ಹೋದ ನಂತರ ನನಗೆ ಕೃಷಿ ಅಲ್ಲದೇ ಬೇರೆ ಏನು ಆದಾಯ ಬರುತ್ತಿತ್ತು ಎಂದರೆ ಸಾಕ್ಷಿ ಕೃಷಿಯೊಂದಿಗೆ ನಾನು ಬೇರೆ ಬೇರೆ ಕಾಲೇಜಿನಲ್ಲಿ ಪಾರ್ಟ ಟೈಮ್ ಲೆಕ್ಚರಾಗಿ ಕೆಲಸ ಮಾಡುತ್ತಿದ್ದೆ, ಅಲ್ಲದೆ ಮನೆಯಲ್ಲಿ ಟ್ಯೂಷನ್ ಮಾಡುತ್ತಿದ್ದೆ, ಆಗಾಗಿ ಆ ಸಮಯದಲ್ಲಿ ನನಗೆ ಮಾಸಿಕ 4-5 ಸಾವಿರ ರೂ ಆದಾಯ ಬರುತ್ತಿತ್ತು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಾನು ಸ್ವಂತಕ್ಕೆ ಆಫ್ ಸೆಟ್ ಪ್ರಿಂಟಿಂಗ್ ಪ್ರೆಸನ್ನು ಸಹ ಇಟ್ಟುಕೊಂಡಿದ್ದೆ

ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನಾ ಎಂದರೆ ಸಾಕ್ಷಿ ಮುಂದೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಬಿ ಪಿ ಎಲ್ ಪಡಿತರ ಚೀಟಿಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ಬಡತನ ರೇಖೆಗಿಂತ ಕಡಿಮೆ ಇರುವ ಮತ್ತು ಆದಾಯ ಕಡಿಮೆ ಇರುವ ಜನರಿಗೆ ಬಿ ಪಿ ಎಲ್ ಕಾರ್ಡು ನೀಡುತ್ತಾರೆ ಎಂದರೆ ಸರಿ.

2. ದಾವಾ ಐಟಂ ನಂ.2 ಮತ್ತು 4 ರ ಸ್ವತ್ತುಗಳನ್ನು ನಾನು ಖರೀದಿಸಿರುವುದಾಗಿ ಕ್ರಯಪತ್ರಗಳನ್ನು ಹಾಕಿದ್ದು ಆ ಸ್ವತ್ತುಗಳನ್ನು ಖರೀದಿಸಲು ಹಣ ಎಲ್ಲಿಂದ ಬಂತು ಎಂದರೆ ಸಾಕ್ಷಿ ನಾನು ಬ್ಯಾಂಕಿನಿಂದ ಸಾಲ ಪಡೆದಿದ್ದು ಹಾಗೂ ನಾನು ಲವ್ ಮ್ಯಾರೇಜಾದ್ದರಿಂದ ನನ್ನ ಹೆಂಡತಿಯ ಮನೆ ಕಡೆಯವರು ಹಣ ನೀಡಿದ್ದರು ಎಂದು ನುಡಿಯುತ್ತಾರೆ. ನನಗೆ ಅಷ್ಟು ಆದಾಯ ಇರಲಿಲ್ಲ, ನಾನು ನನ್ನ ತಂದೆ ವೀರಭದ್ರಪ್ಪ ಮತ್ತು ನನ್ನ ಚಿಕ್ಕಪ್ಪ ಗೋವಿಂದಪ್ಪರವರನ್ನು ಸೇರಿಸಿಕೊಂಡು ದಾವಾ ಐಟಂ ನಂ.2 ಮತ್ತು 4 ರ ಕ್ರಯಪತ್ರಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರಗಳನ್ನು ಮಾಡಿಸಿಕೊಳ್ಳುವ ಕಾಲಕ್ಕೆ ನನ್ನ ಸಹೋದರಿಯರ ಒಪ್ಪಿಗೆ ಇತ್ತ ಎಂದರೆ ಸಾಕ್ಷಿ ನಾನು ಅವರನ್ನು ಕೇಳಿರುವುದಿಲ್ಲ,

ಅಲ್ಲದೆ ಅವರು ಅವರವರ ಗಂಡನ ಮನೆಯಲ್ಲಿ ಪ್ರತ್ಯೇಕ ವಾಸ ಇದ್ದರು ಎಂದು ನುಡಿಯುತ್ತಾರೆ.

3. ದಾವಾ ಐಟಂ ನಂ.8 ಮತ್ತು 9ರ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳಲ್ಲ ಅವು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸುಳ್ಳು. ಸದರಿ ಸ್ವತ್ತುಗಳಲ್ಲಿ ನನ್ನ ತಂದೆಯ ಕುಟುಂಬದ ಎಲ್ಲಾರಿಗೂ ಹಕ್ಕು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಸ್ವತ್ತುಗಳನ್ನು ನನ್ನ ತಂದೆ ಸ್ವಯಾರ್ಜಿತವಾಗಿ ಕೊಂಡುಕೊಂಡಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ 2019ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆಗೆ 2005ರಿಂದಲೂ ಕಣ್ಣು ಕಾಣುತ್ತಿರಲಿಲ್ಲ ಮತ್ತು ವಯಸ್ಸಾದ ಕಾರಣ ಅವರು ಎಲ್ಲಿಯೂ ಸಹ ಓಡಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಆರೋಗ್ಯವಂತರಾಗಿದ್ದು, ಓಡಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ 2006ರಲ್ಲಿ ಬೆಂಗಳೂರಿನ ಸೋಲಾಂಕಿ ಕಣ್ಣಿನ ಆಸ್ಪತ್ರೆಯಲ್ಲಿ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದರು ಎಂದರೆ ಸರಿ. ನನ್ನ ತಂದೆ ತಾಯಿಯರನ್ನು ವಾದಿ ಶಿವಸ್ವಾಮಿಯವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಅವರು ಎಲ್ಲಾರ ಬಳಿಯೂ ಇರುತ್ತಿದ್ದರು ಎಲ್ಲಾರೂ ನೋಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

4. ದಾವಾ ಐಟಂ ನಂ.8 ಮತ್ತು 9ರ ಸ್ವತ್ತುಗಳಿಗೆ ಸಂಬಂದಪಟ್ಟಂತೆ ಮೋಸ ಮಾಡಿ ದಾನಪತ್ರ ಮಾಡಿಸಿಕೊಂಡಿರುತ್ತಾರೆಂದು ನನ್ನ ತಾಯಿಯಾದ 1ನೇ ಪ್ರತಿವಾದಿ ಗಂಗಮ್ಮರವರು ಎ ಸಿ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಸ್ವತ್ತುಗಳನ್ನು ಬಿಡಿಸಿಕೊಡಲು ಮತ್ತು ಜೀವನಾಂಶಕ್ಕಾಗಿ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಜೀವನಾಂಶ ಪಾವತಿ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣದ ಆದೇಶವನ್ನು ಪ್ರಶ್ನಿಸಿ ನಾನು ಮಾನ್ಯ ಜಿಲ್ಲಾಧಿಕಾರಿಗಳ ನ ಮುಂದೆ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ನನ್ನ ತಾಯಿಯನ್ನು ನೋಡಿಕೊಳ್ಳದೆ ಇರುವುದರಿಂದ ನನ್ನ ತಾಯಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಪ್ರಸ್ತುತ ಯಾರ ಜತೆ ವಾಸ ಇದ್ದಾರೆ ಎಂದರೆ ಸಾಕ್ಷಿ ವಾದಿ ಜತೆ ಇದ್ದಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅವರು ಎಲ್ಲಾರಾ ಬಳಿಯೂ ಇರುತ್ತಾರೆ, ಪ್ರಸ್ತುತ ವಾದಿಯ ಬಳಿ ಇದ್ದಾರೆ ಎಂದು ನುಡಿಯುತ್ತಾರೆ.

5. ದಾವಾ ಐಟಂ ನಂ.2, 4, 8 ಮತ್ತು 9 ರ ಆಸ್ತಿಗಳನ್ನು ನನಗೆ ಕೊಡಲು ನನ್ನ ತಂದೆ ವೀರಭದ್ರಪ್ಪರವರಿಗೆ ಇಷ್ಟ ಇಲ್ಲದೆ ಇದ್ದರೂ ಸಹ ಮೋಸದಿಂದ ಸದರಿ ಆಸ್ತಿಗಳಿಗೆ ಸಂಬಂದಪಟ್ಟಂತೆ

ನನ್ನ ಹೆಸರಿಗೆ ಎರಡು ಕ್ರಯಪತ್ರಗಳನ್ನು ಮತ್ತು ಒಂದು ದಾನಪತ್ರವನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಇಷ್ಟ ಪಟ್ಟು ದಾಖಲೆಗಳನ್ನು ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಆರೋಗ್ಯ ಸರಿ ಇಲ್ಲದ ಸಮಯದಲ್ಲಿ ಅವರನ್ನು ವಾದಿಯೇ ನೋಡಿಕೊಂಡಿರುತ್ತಾರೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ನಾನು ಚಿಕಿತ್ಸೆ ಕೊಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.